# ಜನ ಸೇವಕ

ಅಭಿವೃದ್ಧಿಯ ಪರ್ವ

ಸಂಪುಟ 01, ಸಂಚಿಕೆ 04, ಏಪ್ರಿಲ್ 2022, ಯಲ್ಲಾಪುರ

## 5 ಶಾಲೆಗಳ ಸುಧಾರಣೆಗೆ ಕೋಟಿ ಹಣ.

## ರಾಜ್ಯದಲ್ಲೇ ಸಚಿವ ಹೆಬ್ಬಾರ ಸಾಧನೆ



ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ
ಮಾಹಿತಿಯನ್ನು ಹೊಂದಿರುವ ಡಿಜಿಟಲ್ ಸಂಚಿಕೆ



ಸಹಕಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಹಾಗೂ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಶಿರಸಿಯ ಹನುಮಂತಿಯಲ್ಲಿ ಶಿರಸಿ ಡೈರಿಯನ್ನು ಉದ್ಘಾಟಿಸಿದರು.



ಹುಬ್ಬಳ್ಳಿಯ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದು, ಮೈಸೂರಿನ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿಯವರನ್ನು ಭೇಟಿಯಾಗಿ, ಆಶೀರ್ವಾದವನ್ನು ಪಡೆದರು.




ಹಾವೇರಿ ಜಿಲ್ಲಾ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ಹಾವೇರಿಯ ವೈದ್ಯಕೀಯ ಮಹಾವಿದ್ಯಾಲಯದ ನಿರ್ಮಾಣ ಕಾಮಗಾರಿ ಪ್ರಗತಿ ಪರಿಶೀಲನೆಯನ್ನು ನಡೆಸಿದರು.



ಮುಂಡಗೋಡ ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿಗೆ ವಿ.ಆಯ್.ಎಮ್.ಪಿ ಡಿಸ್ಟಿಲರಿಸ್ ಆ್ಯಂಡ್ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ನ ಸಿ.ಎಸ್.ಆರ್. ಅನುದಾನದ ಅಡಿಯಲ್ಲಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನುಉದ್ಘಾಟಿಸಿದರು.



ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಹಾವೇರಿ ಜಿಲ್ಲಾ ವೈದ್ಯಕೀಯ ಮಹಾವಿದ್ಯಾಲಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

" ಸೂರ್ಯ ವಿಶ್ವದ ಎಲ್ಲಾ ದೇಶಗಳನ್ನುನೋಡುತ್ತಾನೆ.
ಆದರೆ ಭಾರತದಂತ ಸ್ವತಂತ್ರ, ಸುಶೀಲ, ಸುಂದರ, ಸಂತೋಷಕರ
ದೇಶವನ್ನು ಸೂರ್ಯ ನೋಡಿರಲು ಸಾಧ್ಯವೇ ಇಲ್ಲ "

- ಭಗತ್ ಸಿಂಗ್



ಸಂಪುಟ 01, ಸಂಚಿಕೆ 04, ಏಪ್ರಿಲ್ 2022, ಯಲ್ಲಾಪುರ

# ಮುಖ ಬಿಂಬ

» **ಅಭಿವೃದ್ಧಿಯ ಮಹಾ ಪರ್ವ**

- ಶಾಲೆಗಳ ಸುಧಾರಣೆಗೆ 5 ಕೋಟಿ ಹಣ. ರಾಜ್ಯದಲ್ಲೇ ಸಚಿವ ಹೆಬ್ಬಾರ ಸಾಧನೆ 4
- ಕಾರ್ಮಿಕರಿಗೆ ನೆರವು ನೀಡಲು ಸದಾಸಿದ್ಧ 6

» **ನಮ್ಮೂರ ಸಾಧಕರು**

- ಹೈನುಗಾರಿಕೆಯಲ್ಲಿ ಕಂಪನಿಗಳಿಗೆ ಪೈಪೋಟಿ 8

» **ಡಾಕ್ಟರ್ ಪ್ಲಸ್**

- **ವೃದ್ಧಾಪ್ಯದಲ್ಲಿ ಆರೋಗ್ಯ** 9

» **ನಮ್ಮೂರ ಪ್ರವಾಸಿತಾಣ**

- ಮುಂಡಗೋಡ ಟಿಬೇಟಿಯನ್ ಕ್ಯಾಂಪ್ 11

» **ಪತ್ರಿಕೆಯಲ್ಲಿ ಕಂಡಂತೆ** 13





# ಶಾಲೆಗಳ ಸುಧಾರಣೆಗೆ
# 5 ಕೋಟಿ ಹಣ.
## ರಾಜ್ಯದಲ್ಲೇ ಸಚಿವ ಹೆಬ್ಬಾರ ಸಾಧನೆ



ಅಭಿವೃದ್ಧಿ ಎಂದರೆ ರಸ್ತೆ,ವಿದ್ಯುತ್,ಮುಂತಾದ ಮೂಲಭೂತ ಸೌಕರ್ಯಗಳಷ್ಟೇ ಅಲ್ಲ. ಅಭಿವೃದ್ಧಿಯ ವ್ಯಾಖ್ಯಾನ ತುಂಬಾ ವಿಶಾಲವಾದದು.ಈ ನೆಲದ ಸಂಸ್ಕೃತಿ,ಭಾಷೆ,ವಿದ್ಯೆ,ಮತ್ತು ಜೀವನದ ಉನ್ನತೀಕರಣವೇ ಅಭಿವೃದ್ಧಿ. ಆ ನಿಟ್ಟಿನಲ್ಲಿ ಅಭಿವೃದ್ಧಿಗೆ ಮೂಲ ಬೇಕಾಗಿದ್ದು ಶಿಕ್ಷಣ. ಶಿಕ್ಷಣ ಅಭಿವೃದ್ಧಿಯ ಮೂಲ ಧಾತು.ಅದಕ್ಕಾಗಿಯೇ ಯಲ್ಲಾಪುರ ಕ್ಷೇತ್ರದಲ್ಲಿ ಮಾನ್ಯ ಕಾರ್ಮಿಕ ಮತ್ತು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ ಅವರು ಪ್ರಸ್ತುತ ಶಿಕ್ಷಣಕ್ಕೆ ಬೇಕಾದ ಮೂಲಸೌಕರ್ಯ ಸುಧಾರಣೆಗೆ ಮುಂದಾಗಿದ್ದಾರೆ.

ಯಲ್ಲಾಪುರ ಕ್ಷೇತ್ರವ್ಯಾಪ್ತಿಯಲ್ಲಿ ತೀರಾ ಹಳ್ಳಿಗಾಡಿನ ಹಿಂದುಳಿದ ಪ್ರದೇಶವೇ ಅಧಿಕವಾಗಿದೆ. ಅಂತಹ ಪ್ರದೇಶದಲ್ಲಿ ಸರಕಾರಿ ಶಾಲೆಗಳೇ ವಿದ್ಯೆ ನೀಡುವ ದೇಗುಲಗಳು. ಇಂತಹ ಹಿಂದುಳಿದ ಪ್ರದೇಶಗಳಲ್ಲಿ ಕೆಲವು ಶಾಲೆಗಳ ಕೊಠಡಿ,ಶೌಚಾಲಯ, ಬೇಂಚ್ ಮುಂತಾದವುಗಳ ಕೊರತೆಯಿರುವುದು ಸಚಿವರ ಗಮನಕ್ಕೆ ಬಂತು.ಅಲ್ಲದೇ ಕೆಲವು ಶಾಲೆಗಳಲ್ಲಿ ಮೇಲ್ಛಾವಣಿ, ಗೋಡೆ,ನೆಲ ಕೂಡ ಸುಸ್ಥಿತಿಯಲ್ಲಿಲ್ಲ ಎನ್ನುವುದು





ಸಚಿವರ ಗಮನಕ್ಕೆ ಬಂದಿತ್ತು.ತಕ್ಷಣ ತಮ್ಮ ಪ್ರಭಾವ ಬಳಸಿ ಸಿ ಎಸ್ ಆರ್ ಫಂಡ್ ಮೂಲಕ 5 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ತಂದು ಪ್ರಸ್ತುತ ವರ್ಷ ಯಲ್ಲಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಲೆಗಳಲ್ಲಿನ ಕೊರತೆ ನೀಗಿಸಲಾಗುತ್ತಿದೆ.

ಖಾಸಗಿ ಕಂಪನಿಗಳು ತಮ್ಮ ಗಳಿಕೆಯ ಎರಡು ಪ್ರತಿಶತ ಹಣವನ್ನು ಸಾಮಾಜಿಕ ಕಾರ್ಯಗಳಿಗಾಗಿ ಮೀಸಲಿಟ್ಟು ಅದನ್ನು ಇಂತಹ ಬಳಕೆಗೆ ನೀಡುತ್ತವೆ.ತಮ್ಮ ಪ್ರಾಮಾಣಿಕ ಕರ್ತವ್ಯ ನಿರ್ವಹಣೆ ಮತ್ತು ಜನಾನುರಾಗಿ ವ್ಯಕ್ತಿತ್ವದಿಂದಾಗಿಯೇ ಸಚಿವರು ತಮ್ಮ ಕ್ಷೇತ್ರಕ್ಕೆ ಈ ಹಣವನ್ನು ತರಲು ಯಶಸ್ವಿಯಾಗಿದ್ದು ಕ್ಷೇತ್ರದಾದ್ಯಂತ ಶಿಕ್ಷಣ ಪ್ರೇಮಿಗಳು, ಪಾಲಕರು ಮತ್ತು ಶಾಲೆಗಳ ವ್ಯಾಪ್ತಿಯ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಲ್ಲದೇ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸಚಿವ ಹೆಬ್ಬಾರರಿಗಿರುವ ಬದ್ಧತೆಯನ್ನು ಇದು ತೋರಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೆರೆಗೆ ನೀರು ತುಂಬಿಸುವ,ಜಲಮೂಲಗಳ ಅಭಿವೃದ್ಧಿ, ರೈತಪರ ನಿಲುವು,ಬಡವರಿಗೆ ವೈಯಕ್ತಿಕ ಸಹಾಯ,ಬನವಾಸಿಯಲ್ಲಿ ವಿದ್ಯುತ್ ವಿತರಣಾ ಘಟಕ ಸೇರಿದಂತೆ ಇಡೀ ಕ್ಷೇತ್ರದ ಜನ ಬಯಸುವ ಕಾರ್ಯಗಳನ್ನು ಮಾಡುತ್ತಿರುವ ಸಚಿವರು ಇದೀಗ ಶಾಲೆಗಳ ಸುಧಾರಣೆಗೆ ಮುಂದಾಗಿರುವುದು ಅವರ ಸಾಧನೆಗೆ ಮತ್ತೊಂದು ಗರಿಮೆಯಾಗಿದೆ.

# ಕಾರ್ಮಿಕರಿಗೆ ನೆರವು ನೀಡಲು ಸದಾಸಿದ್ಧ

**ಕಾರ್ಮಿಕ ಇಲಾಖೆ ಎನ್ನುವುದು ಅತಿದೊಡ್ಡ ಇಲಾಖೆ. ಉದ್ಯಮಿ ಹಾಗೂ ಕಾರ್ಮಿಕರನ್ನು ಒಂದೇ ಸಮನಾಗಿ ತೆಗೆದುಕೊಂಡು ಹೋಗುವ ಮಹತ್ವದ ಜವಾಬ್ದಾರಿ ಈ ಇಲಾಖೆಗೆ ಇದೆ. ಕಾರ್ಮಿಕ ಇಲಾಖೆಯನ್ನು ಪ್ರಭಾವಶಾಲಿ ಇಲಾಖೆಯನ್ನಾಗಿ, ಕಾರ್ಮಿಕರನ್ನು ಭದ್ರವಾಗಿಸಿ ಜೀವನಕ್ಕೆ ಭರವಸೆ ನೀಡಲಾಗುವುದು ಎಂದು ಕಾರ್ಮಿಕ ಇಲಾಖೆ ಸಚಿವ ಶಿವರಾಮ ಹೆಬ್ಬಾರ್ ಹೇಳಿದ್ದಾರೆ. ವಿಶ್ವವಾಣಿಯೊಂದಿಗೆ ಮಾತನಾಡಿದ ಅವರು, ಕಾರ್ಮಿಕ ಇಲಾಖೆಯ ನೂತನ ಯೋಜನೆಯ, ಸವಾಲು, ಕರೋನಾ ಸಮಯದಲ್ಲಿ ತೆಗೆದುಕೊಂಡ ತೀರ್ಮಾನ, ಅಸಂಘಟಿತ ಕಾರ್ಮಿಕರಿಗೆ ಇರುವ ಯೋಜನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.**

**◆ ಕಾರ್ಮಿಕ ಸಚಿವರೇ ನಿಮಗೆ ಕಾರ್ಮಿಕರಾಗಿ ಕೆಲಸಮಾಡಿದ ಅನುಭವ ಇದೆಯಾ?**

ನಾನೊಬ್ಬ ಕಾರ್ಮಿಕನಾಗಿಯೇ ಕೆಲಸ ನಿರ್ವಹಿಸಿದ್ದು ಲಾರಿ ಡ್ರೈವರ್ ಆಗಿ ಕೆಲಸ ನಿರ್ವಹಿಸಿದ್ದೇನೆ. ಕರ್ನಾಟಕ, ಗೋವಾ, ಮಹಾರಾಷ್ಟ್ರ, ಆಂಧ್ರ, ಕೇರಳ ಐದು ರಾಜ್ಯದಲ್ಲಿ ಚಾಲಕನಾಗಿ ಕೆಲಸ ನಿರ್ವಹಿಸಿದ್ದೇನೆ. ಹಸಿವು ಅನ್ನುವ ಕಷ್ಟ ನನಗೆ ಅರಿವಿದೆ. ಹಸಿವು ಎಂದಿಗು ಭಾಷಣದಲ್ಲಿ ಅರಿವಿಗೆ ಬರುವುದಲ್ಲ. ಶ್ರಮಿಕರಿಗೆ ಅದನ್ನು ಅನುಭವಿಸಿದಾಗ ಗೊತ್ತಾಗುವಂತದ್ದು ಹಾಗಾಗಿ ಕಾರ್ಮಿಕರ ಶ್ರಮ ನನಗೆ ಗೊತ್ತಿದೆ.ಅತಿ ಶ್ರೀಘ್ರದಲ್ಲಿ ಡ್ರೈವರ್ ಬಿಲ್ ತರಲಿದ್ದೇವೆ. ಕರ್ನಾಟಕದಲ್ಲಿರುವ ಟ್ರಕ್ ಡ್ರೈವರ್, ಆಟೋ ಡ್ರೈವರ್, ಕ್ಲಿನರ್ ಅವರಿಗೆ ಬೇಕಾಗುವಂತ ಡ್ರೈವರ್ ಬಿಲ್ ತರಲಿದ್ದೇವೆ. ಚಾಲಕರು ಅಪಘಾತದಲ್ಲಿ ಸತ್ತಾಗ ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಪಿಂಚಣಿ ಮುಂತಾದ ಕಾರ್ಯಕ್ಕೆ ಆಗಲಿದೆ. ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಗೆ ನೀಡಲಿದ್ದಾರೆ. ಅತ್ಯಂತ ಬಡವರಿರುವ ಈ ವರ್ಗಕ್ಕೆ ಬೆಂಬಲಿಸುತ್ತಾರೆ.

**◆ ಕಾರ್ಮಿಕ ಇಲಾಖೆಯ ಶಕ್ತಿ ರಾಜ್ಯಕ್ಕೆ ತೋರಿಸುವ ಕೆಲಸ ಮಾಡಿದಿರಾ?**

ಇಲಾಖೆಯಲ್ಲಿ ಕೆಲಸ ಮಾಡುವಂತದ್ದು ಇಚ್ಛಾಶಕ್ತಿ ಮತ್ತು ಕೊಟ್ಟಂತ ಕೆಲಸವನ್ನು ನಿಷ್ಠೆಯಿಂದ ಮಾಡುವಂತದ್ದು ನಮ್ಮ ಜವಾಬ್ದಾರಿ ಅದನ್ನು ಮಾಡಿದ್ದೇನೆ. ಅದರಿಂದ ಕಾರ್ಮಿಕ ಇಲಾಖೆಗೆ ನನ್ನಿಂದ ಹೆಚ್ಚು ಸಹಾಯ ಆಗಿದ್ದರೆ ಸಂತೋಷ. ಇಲಾಖೆಯಿಂದ ನನಗೂ ಒಂದು ಶಕ್ತಿ ಬಂದಿದೆ. ಇಲಾಖೆಯೂ ನನಗೆ ಸಾಕಷ್ಟು ಕಲಿಸಿಕೊಟ್ಟಿದೆ. ಅದರಿಂದ ಇಲಾಖೆ ಮತ್ತು ಕಾರ್ಮಿಕರ ನಡುವೆ ಇಲಾಖೆ ಜತೆಗೇ ಹೋಗಿ ಒಂದು ಸೇತುವೆಯಾಗಿ ಕೆಲಸಮಾಡಿದ್ದೇವೆ. ಎಂದಿಗೂ ಉದ್ಯಮ ವಿರೋಧಿ ಎನಿಸಿಕೊಂಡಿಲ್ಲ. ಕಾರ್ಮಿಕ ಮತ್ತು ಕಾರ್ಮಿಕರಿಗೆ ಕೆಲಸ ಕೊಡುವ ಉದ್ಯಮ ಸ್ನೇಹಿ ಕರ್ನಾಟಕ ಆಗಬೇಕು ಕಾರ್ಮಿಕ ಸ್ನೇಹಿ ಕರ್ನಾಟಕ ಆಗಬೇಕು ಎನ್ನುವುದು ನಮ್ಮ ಉದ್ದೇಶ.

**◆ ನೀವು ಬಂದ ಮೇಲೆ ಇಲಾಖೆಗೆ ವೇಗ ಸಿಕ್ಕಿತ್ತು ಎನ್ನುವ ಮಾತಿದೆ ಹೌದೇ**

ಕಾರ್ಮಿಕ ಇಲಾಖೆ ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ಇಲಾಖೆ ಇದು. ರಾಜ್ಯದಲ್ಲೇ ಎರಡು ಕೋಟಿ ಜನ ಇರುವ ಅವರ ಕಷ್ಟ ಸುಖ ನೋಡುವ ಇಲಾಖೆ ಇದು. ಸಂಘಟಿತ, ಅಸಂಘಟಿತ ಕಾರ್ಮಿಕರನ್ನು ಮತ್ತು ಗುತ್ತಿಗೆ ಕಾರ್ಮಿಕರನ್ನು ಎಚ್ಚರಿಕೆಯಿಂದ ನೋಡಿಕೊಂಡು ಹೋಗಬೇಕಾದ ಇಲಾಖೆ ಇದಾಗಿದ್ದು, ನಾನು ಅಧಿಕಾರ ವಹಿಸಿಕೊಂಡಮೇಲೆ ಸವಾಲು ನಿರ್ಮಾಣವಾಯಿತು. ಕೋವಿಡ್ ಎನ್ನುವ ಮಹಾಮಾರಿ ಬಂದಮೇಲೆ ಕಾರ್ಮಿಕರ ರಕ್ಷಣೆಯೇ ದೊಡ್ಡ ಸವಾಲಾಗಿ ಪರಿಣಮಿಸಿತು. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ವಲಸೆ ಕಾರ್ಮಿಕರ ದೇಶದ ಹಲವಾರು ಭಾಗದಿಂದ ಬಂದವರಿಗೆ ತುತ್ತು ಅನ್ನಕ್ಕೂ ಪರದಾಡುವಂತ ಪರಿಸ್ಥಿತಿಯಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಅಂದಿನ ಯಡಿಯೂರಪ್ಪ ಹಾಗೂ ಇಂದಿನ ಬಸವರಾಜ ಬೊಮ್ಮಾಯಿಯವರು ಒಂದು ಮತ್ತು ಎರಡನೇ ಅಲೆಯಲ್ಲಿ ಕಾರ್ಮಿಕ ಇಲಾಖೆಯಿಂದ ಯಾರೂ ಕೂಡಾ ಹಸಿವಿನಿಂದ ಸಾಯಬಾರದೆಂದು ಸತ್ ಸಂಕಲ್ಪ ಮಾಡಿ ಇಡೀ ಕಾರ್ಮಿಕರಿಗೆ ಈ ಇಲಾಖೆಯ ಬಗ್ಗೆ ಗೌರವ ಹೆಚ್ಚಾಗಲು ಕಾರಣವಾಯಿತು, ಕಷ್ಟ ಕಾಲಕ್ಕೆ ತಮಗೂ ಒಬ್ಬರಿದ್ದಾರೆ ಎನ್ನುವ ಮನಸ್ಥಿತಿ ಅರ್ಥವಾಯಿತು. ಒಂದು ಕೋಟಿಗೂ ಹೆಚ್ಚು ಊಟ ನೀಡಿದ್ದೇವೆ ನಾವು. ಹೊರ ರಾಜ್ಯದಿಂದ



ಬಂದ ಕಾರ್ಮಿಕರಿಗೆ ಬಿ.ಎಂ.ಟಿ.ಸಿ ಬಸ್ ಕ್ಯಾಂಪ್‌ಗಳಲ್ಲಿ ಅವರು ಸ್ಥಳಕ್ಕೆ ತಲುಪುವವರೆಗೂ ನಾವು ಅವರಿಗೆ ಅನ್ನ ನೀರು ವ್ಯವಸ್ಥೆ ಮಾಡಿದ್ದೇವೆ. ಹೀಗೆ ಕಾರ್ಮಿಕ ಇಲಾಖೆ ಅಧಿಕಾರಿಗಳ ತಂಡ ಯುದ್ಧೋಪಾದಿಯಲ್ಲಿ ಕಾರ್ಮಿಕರ ರಕ್ಷಣೆ ಮಾಡುವಂತ ಕೆಲಸವನ್ನು ಮಾಡಿದ್ದೇವೆ,

### ◆ ಕಾರ್ಮಿಕರಿಗೆ ಶಕ್ತಿ ನೀಡಿದಿರೋ ಅಥವಾ ಇಲಾಖೆಗೋ? ಅವರ ಮಕ್ಕಳಿಗೋ?

ಕಾರ್ಮಿಕ ಇಲಾಖೆಗೆ ಕಾರ್ಮಿಕರಿಂದ ಶಕ್ತಿ ತುಂಬಲು, ಶಕ್ತಿಯುತವಾಗಿ ಬೆಳೆಯಲು ಸಾಧ್ಯ . ನಾವು ಅಷ್ಟಕ್ಕೇ ನಿಂತಿಲ್ಲ ರಾಷ್ಟ್ರದ ಅತ್ಯುನ್ನತ ಪರೀಕ್ಷಾ, ಎನ್‌ಐಟಿ, ಎನ್ ಎಐಟಿಯಂತಹ ದೇಶದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಮ್ಮ ಕಾರ್ಮಿಕ ಮಕ್ಕಳು, ಕಟ್ಟಡ ಕಾರ್ಮಿಕ ಮಕ್ಕಳೂ ಸ್ಪರ್ಧಾತ್ಮಕ ಪರಿಕ್ಷೇಯಲ್ಲಿ ಆಯ್ಕೆ ಆದರೆ ಅವರ ಸಂಪೂರ್ಣ ವೆಚ್ಚವನ್ನೂ ನಾವೇ ಭರಿಸುವ ಹಾಗೂ ಅವರ ಹೊರದೇಶಕ್ಕೆ ಹೋಗುವುದಾದರೂ ಅವರ ಸಂಪೂರ್ಣ ವೆಚ್ಚ ಭರಿಸುವ ನಿರ್ಣಯ ಮಾಡಿದ್ದೇವೆ. ಒಟ್ಟಾರೆಯಾಗಿ ಈ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಯಾವುದೇ ಸ್ಪರ್ಧಾತ್ಮಕ ಪರಿಕ್ಷೆಗೆ ಕೂರಿಸಲು ಹಿನ್ನೆಡೆ ಇಲ್ಲ. ಅವರೊಂದಿಗೆ ನನಗೆ ಇಲಾಖೆ ಇದೆ. ಸಮಾಜದ ಮೇಲ್ಪಂಕ್ತಿಯಲ್ಲೂ ಸಾಧ್ಯವಾಗುತ್ತೆ ಎನ್ನುವ ನಿರ್ಣಯವಾಗಿದೆ. ನಾವು ಈ ಹಿಂದೆ 200 ಕೋಟಿ ರೂ.ಗಳಷ್ಟು ವಿದ್ಯಾರ್ಥಿವೇತನ ನೀಡುತ್ತಿದ್ದೆವು. ಅಧಿಕಾರಿಗಳ ಮೂಲಕ ಅದನ್ನು ನೀಡಲಾಗುತ್ತಿದ್ದು, ಅನೇಕ ಮಧ್ಯವರ್ತಿಗಳು ಇದನ್ನು ಶೋಷಣೆಗೆ ಒಳಪಡಿಸುತ್ತಿದ್ದವು. ಈ ಬಾರಿ ಅದನ್ನು ಡಬಲ್ ಮಾಡಿದ್ದು, ನಾಲ್ಕು ನೂರು ಕೋಟಿ ರೂ.ಗಳಷ್ಟು ಹಣವನ್ನು ಕಾರ್ಮಿಕರ ಮಕ್ಕಳ ಕಲ್ಯಾಣ ನಿಧಿಗಾಗಿ ಯು. ಕೆ.ಜಿ.ಯಿಂದ ಅವರು ಕಲಿಯುವಲ್ಲಿಯವರೆಗೂ ಎಲ್ಲ ವೆಚ್ಚವನ್ನೂ ಭರಿಸುವ ದೊಡ್ಡ ಪ್ರಮಾಣದ ಹಣವನ್ನು ನೀಡುತ್ತಿದ್ದು, ಈ ಹಣವನ್ನು ಯಾವ ಮಧ್ಯವರ್ತಿಗಳ ಕೈಗೂ ಸಿಗದಂತೆ ಅವರಿಗೆ ನೇರವಾಗಿ ತಲುಪಿಸುವ ಕೆಲಸ ಮಾಡಿದ್ದೇವೆ. ಬಸವರಾಜ ಬೊಮ್ಮಾಯಿಯವರು ಎರಡು ಘಂಟೆ ಒಳಗಾಗಿ 150 ಕೋಟಿ ರೂಪಾಯಿಯನ್ನು 89 ಸಾವಿರ ಮಕ್ಕಳಿಗೆ ಹಣ ಸಿಗುವಂತ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹೀಗೆ ಕಾರ್ಮಿಕರ ಮಕ್ಕಳಿಗೆ ಎಲ್ಲ ಹಂತದಲ್ಲೂ ಯೋಚಿಸಿ ವಿನೂತನ ಯೋಜನೆಯನ್ನು ಜಾರಿಗೆ ತಂದಿದ್ದೇವೆ.

### ◆ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರು ನಿಮಗೆ ಸವಾಲಾದರೇ?

ಯಾವಾಗಲೂ ಅಸಂಘಟಿತ ಹಾಗೂ ಸಂಘಟಿತ ಕಾರ್ಮಿಕರಿಗೆ ತುಂಬಾ ವ್ಯತ್ಯಾಸವಿದೆ. ಇಷ್ಟು ವರ್ಷ ನಾವು ಹೊಸಬರನ್ನು ನಾವು ನೇಮಕ ಮಾಡುವಾಗ ಸರಕಾರದ ಪರವಾನಗಿಗೆ ಹೋಗಬೇಕಿತ್ತು. ದೇಶದ ಪ್ರಧಾನಿ ಮೋದಿಯವರು ಮೂರು ತಿಂಗಳ ಹಿಂದೆ ಇ ಶ್ರಮ ಯೋಜನೆ ಜಾರಿಗೆ ತಂದಿದ್ದು, ಅಸಂಘಟಿತ ಕಾರ್ಮಿಕ ಪೂಜಾರಿಯಿಂದ ಹಿಡಿದು ಕಟ್ಟ ಕಡೆಯ ವ್ಯಕ್ತಿಗೂ ಇ ಶ್ರಮದಿಂದ ನೋಂದಾಯಿಸಿಕೊಳ್ಳಬಹುದಾಗಿದ್ದು, ಅಟಲ್ ಬಿಹಾರಿ ವಾಜಪೇಯಿ ಸ್ಕೀಮ್‌ನಲ್ಲಿ 2 ಲಕ್ಷರೂಪಾಯಿ ಲಾಭವೂ ಸಿಗುವಂತಾಗಿದೆ. ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ 40 ಲಕ್ಷ ಇ ಶ್ರಮ ಪೋಸ್ಟನ ಹೆಸರು ನೋದಾಯಿಸಿಕೊಂಡಿದ್ದೇವೆ. ನಮ್ಮಲ್ಲಿ 1 ಕೋಟಿ 85 ಲಕ್ಷ ಜನ ಅಸಂಘಟಿತ ಕಾರ್ಮಿಕರಿದ್ದಾರೆ ಎನ್ನುವ ಮಾಹಿತಿ ಇದೆ. ಅದರ ಆಧಾರದ ಮೇಲೆ ಹೆಸರು ನೋಂದಾಯಿಸಿದವರಿಗೆ ಕಷ್ಟದ ಕಾಲದಲ್ಲಿ ನಾವು ಅವರ ಕಷ್ಟಕ್ಕೆ ಬಿಬಿಟಿ ಆಧಾರದ ಮೇಲೆ ಅವರಿಗೆ ಸಹಾಯ ಮಾಡಲು ನಮಗೆ ಸಾಧ್ಯ.

### ◆ ಕಾರ್ಮಿಕ ಇಲಾಖೆಯ ಎಷ್ಟು ಯೋಜನೆ ಅನುಷ್ಠಾನಕ್ಕೆ ಬಂದಿದೆ? ಹೇಗೆ ?

19 ಯೋಜನೆಗಳನ್ನು ಈಗಾಗಲೇ ನಾವು ಅನುಷ್ಠಾನಕ್ಕೆ ತಂದಿದ್ದೇವೆ. ಅಂಬ್ಯುಲೆನ್ಸ್ ಸೇರಿದಂತೆ ವಿದ್ಯಾರ್ಥಿಗಳಿಗೆ 4 ನೂರು ಕೋಟಿ ರೂಪಾಯಿ ಹಣ ನೀಡುತ್ತಿದ್ದೇವೆ. ದೇಶದಲ್ಲೇ ಮೊದಲನೇ ಬಾರಿಗೆ ಕಟ್ಟಡ ಕಾರ್ಮಿಕ ಮಕ್ಕಳಿಗೆ ಐ.ಎಸ್, ಕೆ.ಎ.ಎಸ್ ತರಬೇತಿಯನ್ನು ಉಚಿತವಾಗಿ ಕೊಡುವ ವಿನೂತನ

ಪದ್ಧತಿಯನ್ನು ಬೊಮ್ಮಾಯಿ ಸರಕಾರ ಜಾರಿಗೆ ತಂದಿದೆ. ಮಕ್ಕಳಿಗೆ ಸ್ಪರ್ಧಾತ್ಮಕ ಪರಿಕ್ಷೆಯನ್ನು ಕೆಸಿಸಿ ಮೂಲಕ ಅಪ್ಲಿಕೇಷನ್ ಕರೆದಿದ್ದು 2500 ಕ್ಕೂ ಹೆಚ್ಚು ಕಾರ್ಮಿಕ ಮಕ್ಕಳು ಅರ್ಜಿ ಹಾಕಿದ್ದರು. ಯಾವುದೇ ಹಸ್ತಕ್ಷೇಪ ಇಲ್ಲದೆಯೇ ಅವರ

ಬುದ್ಧಿವಂತಿಕೆಯ ಆಧಾರದ ಮೇಲೆ ಆಯ್ಕೆ ಮಾಡಿ, ಮೊದಲ ಹಂತದಲ್ಲಿ

700 ಜನರಿಗೆ ಆಯ್ಕೆ ಮಾಡಿದ್ದೇವೆ. ಸ್ಟೈಫಂಡ್, ತರಬೇತಿಯ ಎಲ್ಲ ವೆಚ್ಚವನ್ನೂ ನಾವೇ ಭರಿಸುವ ಹೊಣೆ ಹೊತ್ತಿದ್ದೇವೆ. ಬಡವರ ಸೇವೆಗೆ ನಮ್ಮ ಮುಖ್ಯ ಮಂತ್ರಿಗಳು ಸೇವೆಗೆ ಶಕ್ತಿ ಅವಕಾಶ ನೀಡಿದ್ದಾರೆ. ಅದರಿಂದ ಇಲಾಖೆಗೆ ಗೌರವ ಕೊಡಲು ಸಾಧ್ಯವಾಗಿದೆ.

Source - Vishwavani




# ಹೈನುಗಾರಿಕೆಯಲ್ಲಿ ಕಂಪನಿಗಳಿಗೆ ಪೈಪೋಟಿ

ಯಲ್ಲಾಪುರ: ಕಳೆದ 23 ವರ್ಷಗಳಿಂದ ಹೈನುಗಾರಿಕೆಯಲ್ಲಿ ತೊಡಗಿರುವ ತಾಲೂಕಿನ ಗೂಡೇಪಾಲನ ಕೃಷ್ಣ ಭಟ್ಟರು ಹಾಲು ಹಾಗೂ ತುಪ್ಪದ ವ್ಯಾಪಾರದಲ್ಲಿ ಹೆಸರಾಂತ ಕಂಪನಿಗಳಿಗೆ ಪೈಪೋಟಿ ನೀಡುತ್ತಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಉಪಕರಣಗಳನ್ನು ಅಳವಡಿಸಿಕೊಂಡು ಇವರು ಹೈನುಗಾರಿಕೆ ನಡೆಸುತ್ತಿದ್ದಾರೆ. ಆ ಮೂಲಕ ಕಡಿಮೆ ಕೃಷಿಭೂಮಿ ಇದ್ದರೂ ಕೃಷಿ ಪೂರಕ ಉದ್ದಿಮೆಗಳನ್ನು ಯಶಸ್ವಿಯಾಗಿ ಮಾಡಲು ಸಾಧ್ಯ ಎಂದು ಇವರು ಸಾಧಿಸಿ ತೋರಿಸಿದ್ದಾರೆ.

17 ಗುಂಟೆ ಅಡಿಕೆ ಭೂಮಿಯನ್ನು ಹೊಂದಿದ ಕೃಷ್ಣ ಭಟ್ಟರಿಗೆ ಕೊಟ್ಟಿಗೆಯಲ್ಲಿನ ಗೋವುಗಳೇ ಜೀವನಾಧಾರ. ಈ ಹಸುಗಳನ್ನು ನಂಬಿಯೇ ಅವರು ಮೂವರು ಮಕ್ಕಳ ವಿದ್ಯಾಭ್ಯಾಸ ಮುಗಿಸಿದ್ದಾರೆ. ಇಬ್ಬರ ಮದುವೆ ಮಾಡಿದ್ದಾರೆ. ಈಚೆಗೆ ಮನೆಯನ್ನು ಕಟ್ಟಿ ನೆಮ್ಮದಿಯ ಬದುಕು ಕಂಡುಕೊಂಡಿದ್ದಾರೆ. ಎರಡು ದಶಕಗಳ ಹಿಂದೆ 12 ಸಾವಿರ ರೂ ಬಂಡವಾಳ ತೊಡಗಿಸಿ ಎರಡು ಹಸುಗಳನ್ನು ಇವರು ಖರಿದಿಸಿದ್ದರು. ಆ ಹಸುಗಳ ವಂಶವೃಕ್ಷ ಬೆಳೆದಂತೆ ಕೃಷ್ಣ ಭಟ್ಟರ ಜೀವನದಲ್ಲಿಯೂ ಬದಲಾವಣೆಗಳಾದವು. ಶುಚಿತ್ವ ಹಾಗೂ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೇ ನಡೆಸುತ್ತಿರುವ ಹೈನುಗಾರಿಕೆ ಕಸುಬು ಇದೀಗ ವಾರ್ಷಿಕ ಲಕ್ಷಾಂತರ ರೂ ವಹಿವಾಟು ಹೊಂದಿದೆ. ಜಾನುವಾರುಗಳನ್ನು ಪ್ರೀತಿಯಿಂದ ಸಾಕಿ-ಸಲಹುವುದರಲ್ಲಿ ಇವರ ಕುಟುಂಬ ಆತ್ಮತೃಪ್ತಿಯನ್ನು ಕಂಡಿದೆ.

ಪ್ರತಿ ದಿನ ನಸುಕಿನಲ್ಲಿ ಎದ್ದು ಜಾನುವಾರುಗಳ ಆರೈಕೆ ಮಾಡುವುದು ಕೃಷ್ಣ ಭಟ್ಟರ ಮಡದಿ ಪಾರ್ವತಿ ಅವರ ಕಾಯಕ. ಕೊಟ್ಟಿಗೆ ಶುಚಿಗೊಳಿಸುವುದು, ಮೇವು ನೀಡುವುದು ಮೊದಲಾದ ಕೆಲಸಗಳು ನಿತ್ಯದ ರೂಢಿ. ಮೊದಲು ಕೈಗಳಿಂದ ಹಾಲುಗಳನ್ನು ಕರೆದು ಅದನ್ನು ಇವರು ಮಾರಾಟ ಮಾಡುತ್ತಿದ್ದರು. ಇದೀಗ ಮಾನವ ಚಾಲಿತ ಯಂತ್ರದ ಸಹಾಯದಿಂದ ಹಾಲು ಕರೆಯಲಾಗುತ್ತದೆ. ಬಾಟಲಿ ಹಾಗೂ ಸೀಲ್ ಮಾಡಲಾದ ಪ್ಯಾಕೆಟ್ ಗಳಲ್ಲಿ ಹಾಲನ್ನು ಗ್ರಾಹಕರಿಗೆ ತಲುಪಿಸಲಾಗುತ್ತದೆ. ಪ್ರತಿ ದಿನ ಬೆಳಗ್ಗೆ ಹಾಗೂ ಸಂಜೆ ಪಟ್ಟಣಕ್ಕೆ ತೆರಳುವ ಕೃಷ್ಣ ಭಟ್ಟರು ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಹಾಲು ಪೂರೈಸುವ ಧರ್ಮವನ್ನು ತುರ್ತು ಆರೋಗ್ಯ ಪರಿಸ್ಥಿತಿಯ ವೇಳೆಯಲ್ಲಿ ಸಹ ಮರೆತಿಲ್ಲ.

ಹೈನುಗಾರಿಕೆಯಿಂದ ಸ್ವತ: ಅಭಿವೃದ್ಧಿ ಆಗಿದ್ದಲ್ಲದೇ ಅಕ್ಕ-ಪಕ್ಕದ ಮನೆಯವರ ಅಭಿವೃದ್ಧಿಯ ಬಗ್ಗೆಯೂ ಕೃಷ್ಣ ಭಟ್ಟರ ಕುಟುಂಬ ಕಾಳಜಿ ವಹಿಸಿದೆ. ಹೈನುಗಾರಿಕೆಯನ್ನು ಉಪವೃತ್ತಿಯನ್ನಾಗಿಸಿಕೊಂಡವರಲ್ಲಿ ಹಾಲು ಖರೀದಿಸಿ ಅದನ್ನು ಪ್ಯಾಕ್ ಮಾಡಿ ಗ್ರಾಹಕರಿಗೆ ತಲುಪಿಸುವ ಕಾಯಕವನ್ನು ಇವರು ಮಾಡುತ್ತಿದ್ದಾರೆ. ಶುಚಿತ್ವ, ತಾಜಾತನ ಹಾಗೂ ನಂಬಿಕೆಯ ವ್ಯವಹಾರ ಮಾಡಿದಲ್ಲಿ ಯಶಸ್ಸು ಖಚಿತ ಎಂದು ಅವರು ವಿಶ್ವಾಸದಿಂದ ನುಡಿಯುತ್ತಾರೆ.

ಹೈನೋದ್ಯಮದಲ್ಲಿ ಶುಚಿತ್ವ, ತಾಜಾತನ ಹಾಗೂ ನಂಬಿಕೆಯ ವ್ಯವಹಾರ ಮಾಡಿದಲ್ಲಿ ಯಶಸ್ಸು ಖಚಿತ ಹಾಗು. ಗ್ರಾಮೀಣ ಭಾಗದಲ್ಲಿ ಬದುಕು ಕಟ್ಟಿಕೊಳ್ಳಲು ನೂರಾರು ಅವಕಾಶಗಳಿವೆ. ಅವಕಾಶಗಳು ದೊರೆತಾಗ ಅದನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು

ಡಾಕ್ಟರ್ ಪ್ಲಸ್

# ವೃದ್ಧಾಪ್ಯದಲ್ಲಿ ಆರೋಗ್ಯ





ವಯಸ್ಸಾಗುವುದು ಸಹಜ ಪ್ರಕ್ರಿಯೆ. ಅದೊಂದು ಖಾಯಿಲೆಯಲ್ಲ. ಆದರೆ ದೇಹವನ್ನು ಕಾಳಜಿಯಿಂದ ಕಾಪಾಡಿಕೊಳ್ಳದಿದ್ದರೆ ಖಾಯಿಲೆಯ ಗೂಡಾದೀತು. ಜಗತ್ತಿನಾದ್ಯಂತ ಮಾನವನ ಜೀವನ ಮಟ್ಟ ಉತ್ತಮಗೊಂಡಂತೆ, ಸರಾಸರಿ ಆಯುಷ್ಯ ಹೆಚ್ಚಿದಂತೆ, ವೈದ್ಯಕೀಯ ಸೌಲಭ್ಯಗಳು ಕೈಗೆಟಕುತ್ತ ಹೋದಂತೆ ವೃದ್ಧರ ಸಂಖ್ಯೆಯೂ ಅಧಿಕಗೊಳ್ಳುತ್ತಿದೆ.

ಅಂಕಿ ಅಂಶಗಳ ಪ್ರಕಾರ ಭಾರತದ ಜನಸಂಖ್ಯೆಯು 2000 ನೇ ಇಸ್ವಿಯಿಂದ 2050 ನೇ ಇಸ್ವಿಗೆ 60% ರಷ್ಟು ಹೆಚ್ಚುವುದೆಂದು ಅಂದಾಜಿಸಲಾಗಿದ್ದು ಅರವತ್ತು ವರ್ಷ ದಾಟಿದವರ ಪ್ರಮಾಣವು ಈ ಅವಧಿಯಲ್ಲಿ 360% ರಷ್ಟು ಹೆಚ್ಚಲಿಕ್ಕಿದೆಯಂತೆ! ಹೀಗಾಗಿ ಹಿರಿಯ ನಾಗರಿಕರ ಆರೋಗ್ಯ ರಕ್ಷಣೆಗೋಸ್ಕರ ವಿಶೇಷ ಗಮನ ನೀಡಲಾಗಿದೆ. ಎನ್. ಪಿ. ಹೆಚ್. ಸಿ. ಈ. ಎಂಬುದು ಹಿರಿಯರ ಆರೋಗ್ಯರಕ್ಷಣೆಗಾಗಿ ರೂಪುಗೊಂಡಿರುವ ರಾಷ್ಟ್ರೀಯ ಕಾರ್ಯಕ್ರಮ. ವೃದ್ಧರ ಕಾಳಜಿಗಾಗಿ ವಿಶೇಷ ವಾರ್ಡುಗಳನ್ನು ನಿರ್ಮಿಸುವದು, ಪ್ರಯೋಗಾಲಯ ಸೌಲಭ್ಯ, ಔಷಧಿಗಳ ಪೂರೈಕೆ, ಕೌನ್ಸಲಿಂಗ್ ಹಾಗೂ ಫಿಸಿಯೋಥೆರಪಿ ಈ ಕಾರ್ಯಕ್ರಮದಲ್ಲಿ ಅಡಕಗೊಂಡಿವೆ.

ವೃದ್ಧಾಪ್ಯದಲ್ಲಿ ಸಾಮಾನ್ಯವಾಗಿ ತಲೆದೋರುವ ಸಮಸ್ಯೆಗಳಾದ ಅಧಿಕ ರಕ್ತದೊತ್ತಡ, ಮಧುಮೇಹ, ಮೋತಿ ಬಿಂದು, ಮೂಳೆ ಸವಕಳಿ, ಸಂದು ವಾತ, ನೆನಪಿನ ಶಕ್ತಿಯ ಕೊರತೆ, ಕ್ಯಾನ್ಸರ್, ಕಿವುಡುತನ, ಮೂತ್ರ ಸಂಬಂಧೀ ಖಾಯಿಲೆಗಳು, ಖಿನ್ನತೆ, ಹೃದಯ ಸಂಬಂಧಿ ಖಾಯಿಲೆಗಳು, ಪಾರ್ಶ್ವವಾಯು ಈ ಮೊದಲಾದ ಕಾಯಿಲೆಗಳಿಗೆ ವೈದ್ಯರ



ಸಲಹೆಯ ಅನುಗುಣವಾಗಿ ಚಿಕಿತ್ಸೆ ಪಡೆಯಬೇಕು. ಹತ್ತಿರದ ಸರ್ಕಾರಿ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ಸೌಲಭ್ಯ ಉಚಿತವಾಗಿ ದೊರಕುತ್ತದೆ. ವೃದ್ಧಾಪ್ಯದಲ್ಲಿ ಆರೋಗ್ಯಯುತವಾಗಿ ಹಾಗೂ ಆಹ್ಲಾದಕರವಾಗಿ ಇರಲು ಈ ಸಪ್ತಸೂತ್ರಗಳು ನೆನಪಿನಲ್ಲಿರಲಿ:

ನಿವೃತ್ತರಾದರೂ ಪ್ರವೃತ್ತಿ-ಹವ್ಯಾಸಗಳಿರಲಿ. ಹಸನ್ಮುಖಿಯಾಗಿ ಚಟುವಟಿಕೆಯಿಂದಿರಿ. ಸದಾ ಕೊರಗುವ, ನಿರ್ಲಕ್ಷಿಸುತ್ತಾರೆಂದು ದುಃಖಿಸುವ, ಬೇರೆಯವರನ್ನು ಶಪಿಸುವ ಮನೋಭಾವ ಬೇಡ.

ನಿಯಮಿತ ವೈದ್ಯಕೀಯ ತಪಾಸಣೆ ಇರಲಿ. ವೈದ್ಯರ ಸಲಹೆಗಳನ್ನು ಪಾಲಿಸಿ. ಕೆಲವರು ಅಡ್ಡ ಪರಿಣಾಮಗಳಾಗಬಹುದೆಂದು ಯಾವ ಮಾತ್ರೆಗಳನ್ನು ಸೇವಿಸಲೂ ಹಿಂಜರಿಯುತ್ತಾರೆ ( ಬಿ.ಪಿ.ಶುಗರ್ ಮಾತ್ರೆಗಳನ್ನೂ ಸೇರಿದಂತೆ) . ಈ ಅತಿಯಾದ ಆತಂಕವೂ ಒಳ್ಳೆಯದಲ್ಲ. ಆದರೆ ಸ್ವಯಂ ವೈದ್ಯ ಬೇಡ.

ಸಾಮಾಜಿಕ ಚಟುವಟಿಕೆಗಳಲ್ಲಿ, ತಮ್ಮ ವಯಸ್ಸಿನವರ ಗುಂಪುಗಳಲ್ಲಿ ಭಾಗವಹಿಸುವುದು ಜೀವನೋತ್ಸಾಹವನ್ನು ಹೆಚ್ಚಿಸುತ್ತದೆ. ಆರೋಗ್ಯವೂ ಉತ್ತಮಗೊಳ್ಳುತ್ತದೆ.

ಅತಿಯಾಗಿ ಚಹಾ, ಕಾಫಿ, ತಂಬಾಕು, ಮದ್ಯಪಾನ ಆರೋಗ್ಯಕ್ಕೆ ಹಿತವಲ್ಲ.

ಸಮತೂಕದ ಸುಲಭವಾಗಿ ಜೀರ್ಣವಾಗುವ ಆಹಾರ ಸೇವನೆ ಹಿತಮಿತವಾಗಿರಲಿ.

ಸಂಗೀತ, ಭಜನೆ, ಕೈತೋಟ, ಪ್ರವಾಸ ಮೊದಲಾದ ಆಸಕ್ತಿದಾಯಕ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಮಾನಸಿಕ ಆರೋಗ್ಯ ಬಲಗೊಳ್ಳುತ್ತದೆ. 'ಮನಸ್ಸೇ ಎಲ್ಲದಕ್ಕೂ ಕಾರಣ' ಎಂಬ ನುಡಿಯಂತೆ ಗಟ್ಟಿ ಮನಸ್ಸಿದ್ದರೆ ದೈಹಿಕ ಆರೋಗ್ಯವೂ ಸದೃಢವಾಗಿರುತ್ತದೆ.

ಊರುಗೋಲು, ವಾಕರ್, ಓದಲು ಭೂತಗನ್ನಡಿ ಮೊದಲಾದ ಸರಳ ಸಹಾಯಕ ವಸ್ತುಗಳನ್ನು ಅಗತ್ಯಕ್ಕೆ ಅನುಗುಣವಾಗಿ ಬಳಸಲು ಹಿಂಜರಿಕೆ ಬೇಡ.

ವೃದ್ಧಾಪ್ಯದಲ್ಲಿ ಆಧಾರಕ್ಕೆ ಸಂಧ್ಯಾ ಸುರಕ್ಷಾ ಯೋಜನೆಯ ಮೂಲಕ ಮಾಸಾಶನದ ಸೌಲಭ್ಯವಿದೆ. ತಾಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳಿಂದ ವಯಸ್ಸಿನ ಪ್ರಮಾಣ ಪತ್ರ ಪಡೆಯಬಹುದಾಗಿದೆ. ಆರೋಗ್ಯ , ಅಧ್ಯಾತ್ಮ, ಆನಂದ ವೃದ್ಧಾಪ್ಯದ ನಿತ್ಯಮಂತ್ರವಾಗಲಿ!

**ಡಾ ಸೌಮ್ಯ ಕೆ.ವಿ.**
ತಜ್ಞ ವೈದ್ಯರು ಯಲ್ಲಾಪುರ



## ನಮ್ಮೂರ ಪ್ರವಾಸಿತಾಣ

# ಮುಂಡಗೋಡ ಟಿಬೇಟಿಯನ್ ಕ್ಯಾಂಪ್

ಎತ್ತ ನೋಡಿದರೂ ಅಚ್ಚಹಸಿರು ಕೃಷಿ ಭೂಮಿ. ಖಡಕ್ ಕನ್ನಡ ಮಾತನಾಡುವ ಜನ. ಉದ್ದಕ್ಕೂ ಸಣ್ಣ ಪುಟ್ಟ ಅಂಗಡಿಗಳು. ಪಟ್ಟಣದ ನಡುವೆ ಜನಸಾಮಾನ್ಯರ ಮಧ್ಯೆ ಕೆಂಪು/ಹಳದಿ ಉಡುಗೆ ತೊಟ್ಟ ಬೌದ್ಧ ಭಿಕ್ಷುಗಳು. ಒಂದು ಕ್ಷಣಕ್ಕೆ ಇವರ ಗುಂಪು ನೋಡಿ ಇದು ನೇಪಾಳನೋ, ಟಿಬೇಟ್ ರಾಜ್ಯವೋ ಎಂಬಂತೆ ಭಾಸವಾಗುತ್ತದೆ. ಆದರೆ ಇದು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲೂಕಿನ ತಟ್ಟಿಹಳ್ಳಿಯ ಟಿಬೇಟಿಯನ್ ಕ್ಯಾಂಪ್/ಕಾಲೋನಿ. ಶಿರಸಿ ಹಾಗೂ ಹುಬ್ಬಳ್ಳಿಯ ಮಧ್ಯೆ ಸಿಗುವ ಸುಂದರ ತಾಣ.



ಸುಮಾರು 54 ವರ್ಷಗಳ ಹಿಂದಿನ ಇತಿಹಾಸ ಹೊಂದಿದೆ, ಆಗಿನ ಮೈಸೂರು ಸರ್ಕಾರವು ವಲಸೆ ಬಂದ ಟಿಬೇಟಿಯನ್ ಜನರಿಗೆ ಜಾಗ ನೀಡಿ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಿತ್ತು. ಅದರಂತೆ ಅವರು ಇಲ್ಲಿನ ಕ್ಯಾಂಪ್ ಗಳನ್ನು ಟಿಬೇಟಿಯನ್ ವಾಸ್ತು ಶೈಲಿಯಂತೆ ರಚಿಸಿದ್ದಾರೆ. ಈ ಕ್ಯಾಂಪ್ ನ ಒಳಗೆ ಬುದ್ಧನ ಪ್ರತಿಮೆಗಳಿದ್ದು, ಅದನ್ನು ಪ್ರತಿನಿತ್ಯ ಪ್ರಾರ್ಥಿಸಲಾಗುತ್ತದೆ. ಇವರು ಶಿಸ್ತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, ಕ್ಯಾಂಪ್ ನ ಒಳಗಡೆ ಸಾಲಿನಲ್ಲಿ ಕುಳಿತು ತಮಗೆ ನೀಡಿದ ಆಹಾರದ ಪಾತ್ರೆಯನ್ನು ಮುಂದಿಟ್ಟುಕೊಂಡು ಭಕ್ತಿಯಿಂದ ಮಂತ್ರ ಪಠಣ ಮಾಡುತ್ತಾರೆ. ಮಂತ್ರ ಪಠಿಸುವ ಈ ಕ್ರಮವನ್ನು ನೋಡು ನೋಡುತ್ತಿದ್ದಂತೆ ನಾವೂ ಮಂತ್ರಮುಗ್ಧರಾಗಿಬಿಡುತ್ತೇವೆ.

ಕ್ಯಾಂಪ್ ನ ಹೊರಭಾಗದಲ್ಲಿ ಅಲ್ಲಿಗೆ ಭೇಟಿ ನೀಡುವವರಿಗೆ ರುಚಿ ರುಚಿಯಾದ ಮೊಮೋಸ್, ತುಕ್ಪ, ನೂಡಲ್ಸ್ ನಂತಹ ತಿನಿಸುಗಳು ತಯಾರಿರುತ್ತವೆ. ಇನ್ನು ಅವರದ್ದೇ ಶೈಲಿಯ ಉಡುಗೆಗಳು, ಮನೆಯ ಅಲಂಕಾರಿಕ ವಸ್ತುಗಳ ಮಾರಾಟದ ಅಂಗಡಿಗಳಿಗೆ ಒಮ್ಮೆ ಭೇಟಿ ನೀಡಲೇಬೇಕು. ಇಲ್ಲಿ ಕೇವಲ ಕ್ಯಾಂಪ್ ಮಾತ್ರವಲ್ಲದೆ ಶಾಲೆಗಳು, ಆಸ್ಪತ್ರೆ, ಪೋಸ್ಟ್ ಆಫೀಸ್, ಬ್ಯಾಂಕ್ ಗಳು ಈ ಕಾಲೋನಿಯಲ್ಲಿ ಸ್ಥಾಪಿತವಾಗಿವೆ.

